ಸಾಕ್ಷಿಯನ್ನು ದಿಃ 25.01.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

ಮುಖ್ಯ ವಿಚಾರಣೆ ಃ ವಿಶೇಷ ಸರಕಾರಿ ಅಭಿಯೋಜಕರವರಿಂದ ಃ

7. ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಲಾಂಗ್ ಮತ್ತು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 94/2018 ರಲ್ಲಿ ನಮೂದಿಸಿರುವ ಸೀಲಾದ ವಸ್ತು ಸಂಖ್ಯೆ 2 ನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ವಸ್ತು ಸಂಖ್ಯೆ 2 ಲಾಂಗ್ ನ್ನು ಮು.ಮಾ 1 ಎಂದು ಗುರುತಿಸಲಾಯಿತು. ಅದೇ ರೀತಿ ಪಿಎಫ್ ಸಂಖ್ಯೆ 96/2018 ರಲ್ಲಿ ನಮೂದಿಸಿರುವ ಸೀಲಾದ ವಸ್ತು ಸಂಖ್ಯೆ 1 ನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ವಸ್ತು ಸಂಖ್ಯೆ 1 ಕ್ಯಾಪ್ ಇರುವ ಚಾಕುವನ್ನು ಮು.ಮಾ 2 ಎಂದು ಗುರುತಿಸಲಾಯಿತು.

8. ನಿಪಿ 3 ಮಹಜರ್ ಸಮಯದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಪಿಪಿ ರವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 85/2018 ರಲ್ಲಿ ನಮೂದಿಸಿರುವ ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ಐಟಂ ನಂ. 2 ರಕ್ತ ಮಿಶ್ರಿತ ಮಣ್ಣು , ಐಟಂ ನಂ. 3 ಸಾದಾ ಮಣ್ಣು , ಐಟಂ ನಂ. 4 ಬಿಳಿ ಬಣ್ಣದ ಅರ್ಧ ತೋಳಿನ ಶರ್ಟು , ಐಟಂ ನಂ. 5 ಸ್ಟೀಲ್ ಸ್ಪೂನ್ , ಐಟಂ ನಂ. 6 ಒಂದು ಟೈಟನ್ ವಾಚ್ , ಐಟಂ ನಂ. 7 ಒಂದು ಜೊತೆ ಲೂನಾರ್ ಚಪ್ಪಲಿಗಳನ್ನು ಕ್ರಮವಾಗಿ ಮು.ಮಾ 3 ರಿಂದ 8 ಎಂದು ಗುರುತಿಸಲಾಯಿತು.

9. ನಿಪಿ 3 ಮಹಜರ್ ನ್ನು ಫೋಕಸ್ ಲೈಟ್ ಬೆಳಕಿನಲ್ಲಿ ಬರೆದಿದ್ದರು. ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದರು. ಈಗ ತೋರಿಸಿದ ಫೋಟೋಗಳಲ್ಲಿ ನಾನು ಕಾಣುತ್ತಿದ್ದೇನೆ. 5 ಫೋಟೋಗಳನ್ನು ಕ್ರಮವಾಗಿ ನಿಪಿ 4 ರಿಂದ 7. ಅದೇ ಫೋಕಸ್ ಲೈಟ್ ನಲ್ಲಿ ಘಟನೆಯನ್ನು ನಾನು ನೋಡಿರುತ್ತೇನೆ. ಪೊಲೀಸರು ವಶಪಡಿಸಿಕೊಂಡ ಆಟೋರಿಕ್ಷಾ ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಗೈರುಹಾಜರಿದ್ದು ಆರೋಪಿತರು ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು